# ಕರ್ನಾಟಕ ವಿಧಾನ ಪರಿಷತ್ತು

| | |
|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ | 1001 |
| ಸದಸ್ಯರ ಹೆಸರು | ಶ್ರೀ ಕುಶಾಲಪ್ಪ ಎಂ.ಪಿ (ಸುಜಾ)<br>(ಸ್ಥಳೀಯ ಸಂಸ್ಥೆಗಳ ಕ್ಷೇತ್ರ) |
| ಉತ್ತರಿಸುವ ದಿನಾಂಕ | 23-02-2024 |
| ಉತ್ತರಿಸುವ ಸಚಿವರು | ಕೃಷಿ ಸಚಿವರು |

| ಕ್ರ. ಸಂ | ಪ್ರಶ್ನೆ | ಉತ್ತರ |
|---|---|---|
| ಅ) | ಕೊಡಗು ಜಿಲ್ಲೆಯಲ್ಲಿರುವ ಕೃಷಿ ಭೂಮಿಯ ವಿಸ್ತೀರ್ಣ ಎಷ್ಟು; ಹೆಕ್ಟೇರ್ ಎಷ್ಟು; ಪಾಳು ಬಿದ್ದಿರುವ ಕೃಷಿ ಭೂಮಿ ಹೆಕ್ಟೇರ್ ಮತ್ತು ನೀರಾವರಿ ಕೃಷಿ ಭೂಮಿ ಒಟ್ಟು ಹೆಕ್ಟೇರ್ ಎಷ್ಟು; | ಕೊಡಗು ಜಿಲ್ಲೆಯಲ್ಲಿ ಕೃಷಿ ಭೂಮಿಯ ಒಟ್ಟು ವಿಸ್ತೀರ್ಣ 1,64,471.76 ಹೆಕ್ಟೇರ್ ಇದ್ದು, ಪಾಳು ಬಿದ್ದಿರುವ ಭೂಮಿಯ ವಿಸ್ತೀರ್ಣ 4,889 ಹೆಕ್ಟೇರ್ ಮತ್ತು ನೀರಾವರಿ ಕೃಷಿ ಭೂಮಿಯ ವಿಸ್ತೀರ್ಣ 4,051 ಹೆಕ್ಟೇರ್ ಇರುತ್ತದೆ. |
| ಆ) | ಪಾಳು ಬಿದ್ದಿರುವ ಕೃಷಿ ಭೂಮಿಯನ್ನು ಪುನಶ್ಚೇತನಗೊಳಿಸುವ ಯಾವುದಾದರೂ ಯೋಜನೆ ಸರ್ಕಾರದ ಮುಂದಿದೆಯೇ; | ಪಾಳು ಬಿದ್ದಿರುವ ಕೃಷಿ ಭೂಮಿಯನ್ನು ಪುನಶ್ಚೇತನಗೊಳಿಸುವ ಯಾವುದೇ ಯೋಜನೆ/ಪ್ರಸ್ತಾವನೆಗಳು ಸರ್ಕಾರದ ಮುಂದಿರುವುದಿಲ್ಲ. |
| ಇ) | ರಾಜ್ಯದಲ್ಲಿ ಭತ್ತದ ಬೆಳೆಗೆ ಪ್ರೋತ್ಸಾಹಧನ ನೀಡುವ ಪ್ರಸ್ತಾವನೆ ಸರ್ಕಾರದ ಮುಂದಿದೆಯೇ? | ಕೃಷಿ ಇಲಾಖೆ:<br>ಕೇಂದ್ರ ಪುರಸ್ಕೃತ-ಆಹಾರ ಮತ್ತು ಪೌಷ್ಠಿಕ ಭದ್ರತೆ ಯೋಜನೆ - ಅಕ್ಕಿ (FNS-Rice) ಕಾರ್ಯಕ್ರಮವನ್ನು ರಾಜ್ಯದ 7 ಜಿಲ್ಲೆಗಳಲ್ಲಿ (ಬೆಳಗಾವಿ, ದಕ್ಷಿಣ ಕನ್ನಡ, ಹಾವೇರಿ, ಶಿವಮೊಗ್ಗ, ಉಡುಪಿ, ಉತ್ತರಕನ್ನಡ ಮತ್ತು ಯಾದಗಿರಿ) ಅನುಷ್ಠಾನಗೊಳಿಸಲಾಗುತ್ತಿದೆ.<br>ಪ್ರಸ್ತುತ, ಭತ್ತದ ಬೆಳೆಗೆ ಪ್ರೋತ್ಸಾಹಧನ ನೀಡುವ ಯಾವುದೇ ಪ್ರಸ್ತಾವನೆ ಸರ್ಕಾರದ ಮುಂದೆ ಇರುವುದಿಲ್ಲ.<br>ಆಹಾರ ನಾಗರಿಕ ಸರಬರಾಜು ಗ್ರಾಹಕರ ವ್ಯವಹಾರಗಳ ಮತ್ತು ಕಾನೂನು ಮಾಪನಶಾಸ್ತ್ರ ಇಲಾಖೆ:<br>2023-24 ನೇ ಸಾಲಿನ ಮುಂಗಾರು ಋತುವಿನಲ್ಲಿ ಕನಿಷ್ಟ ಬೆಂಬಲ ಬೆಲೆ ಯೋಜನೆಯಡಿ ಕೇಂದ್ರ ಸರ್ಕಾರವು ನಿಗಧಿಪಡಿಸಿರುವ ದರದಲ್ಲಿ ರಾಜ್ಯದ ರೈತರಿಂದ ಭತ್ತ, ಖರೀದಿಸಲಾಗುತ್ತಿದೆ.<br><br>ಆಹಾರಧಾನ್ಯ — ಪ್ರತಿ ಕ್ವಿಂಟಾಲ್‌ಗೆ ದರ ರೂಗಳಲ್ಲಿ<br>ಭತ್ತ (ಸಾಮಾನ್ಯ) — 2183<br>ಭತ್ತ (ಗ್ರೇಡ್-ಎ) — 2203 |

| | | |
|---|---|---|
| | | ಕೇಂದ್ರ ಸರ್ಕಾರ ಅನುಮತಿಸಿರುವಂತೆ 2023-24ನೇ ಸಾಲಿನಲ್ಲಿ ಭತ್ತ ಖರೀದಿಗೆ 2.5 ಲಕ್ಷ ಮೆ.ಟನ್ ಗುರಿ ನಿಗಧಿಪಡಿಸಲಾಗಿದ್ದು, ದಿನಾಂಕ: 16-02-2024ರಲ್ಲಿದ್ದಂತೆ 301.500 ಮೆ.ಟನ್ ಪ್ರಮಾಣಕ್ಕೆ 110 ರೈತರು ನೊಂದಣಿ ಮಾಡಿಕೊಂಡಿರುತ್ತಾರೆ.<br><br>2023-24 ನೇ ಸಾಲಿನ ಮುಂಗಾರು ಋತುವಿನಲ್ಲಿ ಕನಿಷ್ಟ ಬೆಂಬಲ ಬೆಲೆ ಯೋಜನೆಯಡಿ ರಾಜ್ಯದ ರೈತರಿಂದ ಖರೀದಿಸಲಾಗುವ ಭತ್ತಕ್ಕೆ ಪ್ರೋತ್ಸಾಹ ಧನ ನೀಡುವ ಬಗ್ಗೆ ಪ್ರಸ್ತಾವನೆ ಇರುವುದಿಲ್ಲ. |

ಸಂಖ್ಯೆ: AGRI/34/ACT/2024

23/2

**(ಎನ್. ಚೆಲುವರಾಯಸ್ವಾಮಿ)**
ಕೃಷಿ ಸಚಿವರು